ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ. DW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 29.08.2025

ಮುಂದುವರೆದ ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದಃ

ಸಾಕ್ಷಿಗೆ ಈಗ ದಿನಾಂಕ 08.07.2025 ರ ಪಾಟೀ ಸವಾಲಿನ ಸಾಕ್ಷಿಯ ಹಾಳೆಗಳನ್ನು ತೋರಿಸಿ ಅದರಲ್ಲಿರುವ ಸಹಿ ನಿಮ್ಮದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವುಗಳನ್ನು ನೋಡಿ ಹೌದು ಎಂದು ನುಡಿಯತ್ತಾರೆ.

ಸಾಕ್ಷಿಗೆ ಈಗ ನಿಪಿ.1 ಅನ್ನು ತೋರಿಸಿ ಅದರಲ್ಲಿರುವ ಸಹಿ ನಿಮ್ಮದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದನ್ನು ನೋಡಿ ಹೌದು ಎಂದು ನುಡಿಯತ್ತಾರೆ. ನಿಪಿ.1 ಅನ್ನು ಮಂಜುನಾಥ್ ರವರಿಗೆ ನೀವು ಕೊಡುವ ಸಂದರ್ಭದಲ್ಲಿ ಯಾರು ಯಾರು ಹಾಜರಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಮಂಜುನಾಥ್ ರವರಿಗೆ ಸದರಿ ಚೆಕ್ ಅನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ತಾಯಿರವರು ರತ್ನಮ್ಮ ರವರ ಹತ್ತಿರ ಚೀಟಿ ವ್ಯವಹಾರ ಮಾಡಿದ್ದು ಅದಕ್ಕೆ ಸಂಬಂಧಿಸಿದಂತೆ ಅದರ ಭದ್ರತೆಗಾಗಿ ನನ್ನ ಚೆಕ್ಕನ್ನು ನನ್ನ ತಾಯಿರವರು ರತ್ನಮ್ಮರವರಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಚೀಟಿಯ ಮೌಲ್ಯ ರೂ.1 ಲಕ್ಷ ಇರುತ್ತದೆ. ಸದರಿ ಚೀಟಿಯು ತಿಂಗಳಿಗೆ ರೂ.5,000/- ದ್ದು ಇರುತ್ತದೆ.

ನಿಪಿ.1 ಚೆಕ್ ಅನ್ನು ನೀವು ನಿಮ್ಮ ತಾಯಿರವರಿಗೆ ಯಾವ ದಿನಾಂಕದಂದು ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚೆಕ್ ಅನ್ನು ನೀಡುವ ಸಂದರ್ಭದಲ್ಲಿ ನಾನು ನನ್ನ ತಾಯಿಯ ಬಳಿ ಏನನ್ನು ಕೇಳಿರುವುದಿಲ್ಲ. ಸದರಿ ಚೀಟಿಯ ಹಣವನ್ನು ನೀವು ಪಡೆದುಕೊಂಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ರತ್ನಮ್ಮ ರವರು ನನಗೆ ಗೊತ್ತಿರುವುದಿಲ್ಲ. ನಾನು ರತ್ನಮ್ಮರವರ ಬಳಿ ಚೀಟಿಯ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದೂರುದಾರರ ಕಡೆಯಿಂದ ರೂ.6 ಲಕ್ಷ ಸಾಲವನ್ನು ಪಡೆದುಕೊಂಡು ಅದಕ್ಕೆ ನಿಪಿ.1 ಚೆಕ್ ಅನ್ನು ನೀಡಿದ್ದು ಈಗ ಯಾವುದೇ ಚೆಕ್ ನೀಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಗಾರೆ ಕೆಲಸ ಮಾಡುತ್ತೇನೆ. ಗಾರೆ ಕೆಲಸದಿಂದ ನಿಮಗೆ ಸಾಕಾಷ್ಟು ಆದಾಯ ಇರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆದಾಯ ಇಲ್ಲ ಎಂದು ನುಡಿಯುತ್ತಾರೆ.

ನಾನು ನನ್ನ ಅತ್ತೆರವರ ಬಳಿ ನನ್ನ ಹೆಣ್ಣು ಮಕ್ಕಳ ಮದುವೆಗೆ ಹಣ ಖರ್ಚಾಗಿರುವ ಬಗ್ಗೆ ಕೇಳಿರುವುದಿಲ್ಲ. ನೀವು ತಂದೆಯಾಗಿ ನಿಮ್ಮ ಮಕ್ಕಳ ಮದುವೆಗೆ ರೂ.10 ಗಳನ್ನು ಸಹಾ ಖರ್ಚು ಮಾಡಿಲ್ಲವೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅಷ್ಟೋ ಇಷ್ಟೋ ಖರ್ಚು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅಂದಾಜು ರೂ.30 ರಿಂದ 40 ಸಾವಿರ ಖರ್ಚಾಗಿರಬಹುದು. ಸದರಿ ಹಣವನ್ನು ನಾನು ನನ್ನ ಸ್ನೇಹಿತರ ಬಳಿ ಸಾಲವಾಗಿ ಪಡೆದಿರುತ್ತೇನೆ.

(ಈ ಹಂತದಲ್ಲಿ ದೂರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಅನುಮತಿ ನೀಡಲಾಯಿತು)

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಸಾ.ಓ.ಹೇ.ಸ.ಒ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**